
ಹಣ್ಣುಕಾಯಿ ಮಾಡಿಸಲು ಆರಂಭ ಮಾಡಿದರು. ಪ್ರತಿಯೊಬ್ಬನ ಬಳಿಯೂ ಆ ದೆಯ್ಯ ತುಂಬ ಶೈಲೀಕರಣಗೊಂಡ ನುಡಿಗಟ್ಟಿನಲ್ಲಿ ಏನೋ ಹೇಳುತ್ತಿತ್ತು; ಪಕ್ಕದಲ್ಲಿದ್ದ ಇನ್ನೊಬ್ಬ ಪೂಜಾರಿಯಂಥವ ಅದನ್ನು ಮಲಯಾಳದಲ್ಲಿ ಪರಿವರ್ತಿಸಿ ಹೇಳುತ್ತಿದ್ದ. ನಾವೂ ಹತ್ತಿರ ಹೋಗಿ ಅದನ್ನು ಒಂದಿಷ್ಟು ಹೊತ್ತು ಆಲಿಸಿದೆವು. ಆದರೆ, ಭಾಷೆ ಬಾರದ್ದರಿಂದ ನಮಗೆ ಅದು ಏನೂ ತಿಳಿಯಲಿಲ್ಲ; ಸಮಸ್ಯೆ ಮತ್ತು ಪರಿಹಾರಗಳ ಒಂದು ಪ್ರಶ್ನೋತ್ತರ ಇಲ್ಲಿ ನಡೆಯುತ್ತಿದೆ ಎಂಬುದಷ್ಟಂತೂ ಅರ್ಥವಾಯಿತು. ಅಷ್ಟರಲ್ಲಿ ನಮ್ಮ ಗಡಿಯಾರ ಎರಡು ಗಂಟೆಯನ್ನು ತೋರಿಸತೊಡಗಿದ್ದರಿಂದ, ನಿಧಾನವಾಗಿ ಜನಜಂಗುಳಿಯನ್ನು ಸರಿಸಿಕೊಳ್ಳುತ್ತ ನಾವು ಜಾಗ ಖಾಲಿ ಮಾಡಿದೆವು.



ಹೊರಬಂದು ಹುಡುಕಿದರೆ, ಗೋಪಾಲನ್ ಅವರ ಕಾರು ಮೊದಲು ನಿಲ್ಲಿಸಿದ ಜಾಗದಲ್ಲಿ ಇರಲಿಲ್ಲ. ನನ್ನ ಮಿತ್ರರು ಅದನ್ನು ಹುಡುಕಲಿಕ್ಕೆ ಹೊರಟರು. ನಾನು ಒಂದು ದಿಬ್ಬದ ಮೇಲೆ ನಿಂತು, ದೂರದಲ್ಲಿ ಸೇರಿದ್ದ ಆ ಜನಜಂಗುಳಿಯನ್ನು ಲಾಂಗ್ ಶಾಟಿನಲ್ಲಿ ನೋಡುತ್ತಿದ್ದೆ. ಕತ್ತಲಿನ ಆ ಮೊತ್ತದ ನಡುವೆ ದೊಂದಿಯ ಬೆಳಕಲ್ಲಿ ಹೊಳೆಯುವ ಒಂದು ಪುಟ್ಟ ಪ್ರಭಾವಲಯವೂ ಆ ವಲಯದೊಳಕ್ಕೆ ಆ ಸಮೂಹವು ಆವಾಹಿಸಿಕೊಳ್ಳುತ್ತಿದ್ದ ಲೋಕಾಂತರದ ಒಂದು ವಿಶಾಲ ವಲಯವೂ ಒಂದರಮೇಲೊಂದು ಕೂಡಿಕೊಂಡ ಸಂಯುಕ್ತಚಿತ್ರದ ಹಾಗೆ ಅದು ನನಗೆ ಗೋಚರವಾಗುತ್ತಿತ್ತು. 'ವಸುಧಾ–ವಳಯ–ವಿಲೀನ–ವಿಶದ–ವಿಷಯ–ವಿಶೇಷ' ಅಂದರೆ ಇದೇ ಇರಬಹುದಲ್ಲವೆ? – ಅಂದುಕೊಂಡೆ. ಅಷ್ಟರಲ್ಲಿ ಗೋಪಾಲನ್ ಸಿಕ್ಕಿದ್ದಾರೆಂದು ನನ್ನ ಸಹಪಾಠಿಗಳು ಕೈಬೀಸಿ ಕರೆದರು.

★★★

ಕರೆದೊಯ್ಯುವಾಗ ಅಷ್ಟೆಲ್ಲ ಮಾತಾಡಿದ್ದ ಗೋಪಾಲನ್ ನಮ್ಮ ಮರುಪ್ರಯಾಣದಲ್ಲಿ ಮೌನಿಯಾಗಿಬಿಟ್ಟಿದ್ದರು. ಪಾಪ, ನಮಗಾಗಿ ಅವತ್ತಿನ ಸುಖನಿದ್ರೆಯನ್ನೂ ಕಳೆದುಕೊಂಡರಲ್ಲ ಅನ್ನಿಸಿ ಅವರತ್ತ ನೋಡಿದೆ – ಅವರು, ಬೇರಾವ ಪರಿವೆಯೂ ಇಲ್ಲದವರಂತೆ ನೇರ ರಸ್ತೆಯನ್ನೇ ನೋಡುತ್ತ ಹೆದ್ದಾರಿಯಲ್ಲಿ ಕಾರು ಓಡಿಸುತ್ತಿದ್ದರು.